| | | |
|---|---|---|
| ತರಗತಿ : 8 | ಎರಡನೆಯ ಸಂಕಲನಾತ್ಮಕ ಪರೀಕ್ಷೆ | ವಿಷಯ ಸಂಕೇತ : 33ಕೆ |
| ಸಮಯ:1.30 ಗಂಟೆ | ವಿಷಯ: ದ್ವಿತೀಯ ಭಾಷೆ ಕನ್ನಡ | ಅಂಕಗಳು: 50 |

---

**I**. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರ ಸೂಚಿಸಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ. **3X1=3**

1) ಕನ್ನಡ ವರ್ಣಮಾಲೆಯಲ್ಲಿರುವ ಸ್ವರಗಳ ಸಂಖ್ಯೆ :

ಎ) 34 ಬಿ) 02 ಸಿ) 13 ಡಿ) 49

2) " ಸರಸ್ವತಿ" ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.

ಎ) ಸ್ತ್ರೀಲಿಂಗ ಬಿ) ಪುಲ್ಲಿಂಗ ಸಿ) ನಪುಂಸಕಲಿಂಗ ಡಿ) ಸರ್ವನಾಮ

3) "ಗುರುವನ್ನು" ಇದು --------- ಸಂಧಿಗೆ ಉದಾಹರಣೆ

ಎ) ಲೋಪಸಂಧಿ ಬಿ) ಆಗಮಸಂಧಿ ಸಿ) ಸವರ್ಣದೀರ್ಘಸಂಧಿ ಡಿ) ಆದೇಶಸಂಧಿ

**II**.ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ **8X1=8**

4) ಸುಕ್ರಿಯವರ ತಂದೆಯಲ್ಲಿದ್ದ ಜಾನಪದ ಕಲೆಗಳಾವುವು?

5) ಸುಕ್ರಿಯವರಲ್ಲಿ ಕಾಣಬರುವ ವಿಶೇಷ ಗುಣ ಯಾವುದು?

6) ಗಣೇಕಲ್ ಶಿವಯ್ಯನವರ ಸಂಗೀತ ಕೇಳಲು ಕಳ್ಳರು ಏಕೆ ಒಪ್ಪಿಕೊಂಡರು?

7) ತಾರಾನಾಥರು ಆಶ್ರಮವನ್ನು ಏಕೆ ಕಟ್ಟಿದರು?

8) ಮಳೆ ಬರುವಾಗ ಹಳ್ಳಿಯವರು ಏನು ಮಾಡತ್ತಾರೆ?

9) ಸೂರ್ಯಚಂದ್ರರು ಬಾಹುಬಲಿಗೆ ಏಕೆ ನಮಿಸಿದರು?

10) ರೈತರಿಗೆ ಸುಖ ನಿದ್ದೆಗಳು ಯಾವಾಗ ಸಿಗುತ್ತವೆ?

11) ನೊಂದ ಬಯಲುಗಳು, ಬೆಂದ ಬೆಟ್ಟಗಳು ತಂಪಾಗುವುದು ಯಾವಾಗ?

**III**. ಈ ಕೆಳಗಿನ ಪ್ರಶ್ನೆಗಳಿಗೆ ಮೂರು/ ನಾಲ್ಕು ವಾಕ್ಯದಲ್ಲಿ ಉತ್ತರಿಸಿ **5X2=10**

12) ವತ್ಸ ಮತ್ತು ಮಗದ ರಾಜ್ಯದ ಜನರು ಗಂಗಾ ನದಿಯನ್ನು ತಾಯಿಯಂತೆ ಏಕೆ ಪೂಜಿಸುತ್ತಿದ್ದರು?

13) ಶ್ರವಣ ಪಿತೃಭಕ್ತಿ ನಾಟಕದಲ್ಲಿನ ಯಾವ ಅಂಶ ಗಾಂಧೀಜಿಯವರ ಮೇಲೆ ಪ್ರಭಾವ ಬೀರಿತು?

14) ಸಸಿಯೊಂದು ಮರವಾಗಿ ಬೆಳೆಯುವ ರೀತಿಯನ್ನು ಕವಿ ಹೇಗೆ ವರ್ಣಿಸಿದ್ದಾರೆ?

15) ಬಾಲಕರ ಹಾಡು ಮತ್ತು ನಾಡು ಯಾವ ಸ್ವರೂಪದ್ದಾಗಿದೆ? ಏಕೆ?

16) ಬಸವಣ್ಣನವರ ದೃಷ್ಟಿಯಲ್ಲಿ ನುಡಿ ಹೇಗಿರಬೇಕು?

**IV**. ಈ ಕೆಳಗಿನ ಕೃತಿಕಾರರ ಕಾಲ, ಸ್ಥಳ, ಕೃತಿಗಳು ಮತ್ತು ಪ್ರಶಸ್ತಿಗಳನ್ನು ವಾಕ್ಯರೂಪದಲ್ಲಿ ಬರೆಯಿರಿ. **1X2=2**

17) ಹಾ. ಮಾ. ನಾಯಕ

**V.** ಈ ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ **1X2=2**

18. ಆಚಾರಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು । ನನಕಂದ
ಜ್ಯೋತಿಯೇ ಆಗು ಜಗಕೆಲ್ಲ

**VI**. ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ **1X3=3**

19) 'ಕೈ ಕೆಸರಾದರೆ ಬಾಯಿ ಮೊಸರು' "ಅಥವಾ" 'ದೇಶ ಸುತ್ತಿ ನೋಡು; ಕೋಶ ಓದಿ ನೋಡು'

**VII**. ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭದೊಡನೆ ವಿವರಿಸಿ. **4X2=8**

20) "ನಾವು ನಿಜಕ್ಕೂ ಅದೃಷ್ಟ ಮಾಡಿರಬೇಕು."

21) "ಸುಮ್ಮನೆ ದೂರಬೇಡಿ, ಏನಾದರೂ ಮಾಡಿ."

22) "ಬಣ್ಣಬಣ್ಣದ ಹಕ್ಕಿಗಳು ಉಲಿಯುತ್ತಿದ್ದವು."

23) "ಗುಣಕೆ ಕಾರಣವೊಂದೆ."

**VIII.** ಈ ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ **1X2=2**

24) ಎಲ್ಲೋ ಹುಡುಕಿದೆ--------------- "ಅಥವಾ" ಎಲ್ಲಿದೆ ನಂದನ? ----------------

-------------------------- ----------------------------

-------------------------- ----------------------------

-------------------ನಮ್ಮೊಳಗೆ ॥ --------------------ನಾಲಗೆಗೆ ॥

**IX.** ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ **2X2=4**

ಮನುಷ್ಯ ಪರಿಸರದ ಕೂಸು ಎಂಬುದು ಪ್ರಸಿದ್ಧವಾದ ಮಾತು. ಪರಿಸರ ಎಂಬುದು ಮನುಷ್ಯನಿಗೆ ಮಾತ್ರವಲ್ಲ ಪ್ರತಿಯೊಂದು ಜೀವಿಗೂ ತಾಯಿಯ ಸಮಾನ. ಆದರೆ ಇಂದು ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿದ್ದಾನೆ. ಇದರಿಂದ ಪರಿಸರ ನಾಶವಾಗುತ್ತಿದೆ. ಮಾನವನು ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ವಿವಿಧ ರೀತಿಯಲ್ಲಿ ಹಾಳು ಮಾಡುತ್ತಿದ್ದಾನೆ. ಇದಕ್ಕೆ ಪ್ರತಿಯಾಗಿ ಪ್ರಕೃತಿ ನೆರೆಹಾವಳಿ, ಭೂಕಂಪ, ಅತಿವೃಷ್ಟಿ, ಅನಾವೃಷ್ಟಿ, ಅಕಾಲವೃಷ್ಟಿ, ಚಂಡಮಾರುತ, ಸಾಂಕ್ರಾಮಿಕ ರೋಗಗಳ ಮೂಲಕ ಪ್ರತಿಭಟನೆಯನ್ನು ನಡೆಸಿದೆ. ಇದನ್ನು ಅರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ. ಪರಿಸರ ಮಾಲಿನ್ಯಕ್ಕೆ ಅತಿಕ್ರಮಣ ಸಾಗುವಳಿ, ಅರಣ್ಯನಾಶ, ರಾಸಾಯನಿಕ ಗೊಬ್ಬರಗಳ ಬಳಕೆ, ಗಣಿಗಾರಿಕೆ ಮುಂತಾದವುಗಳು ಕಾರಣಗಳಾಗಿವೆ. ದಿನದಿಂದ ದಿನಕ್ಕೆ ಅಂತರ್ಜಲದ ಮಟ್ಟ ಕುಸಿಯುತ್ತಿದೆ. ಎಷ್ಟೋ ಜೀವಸಂಕುಲಗಳು ಅಳಿವಿನಂಚಿನಲ್ಲಿವೆ. ಪರಿಸರದಲ್ಲಿ ಒಂದು ಅಂಶವು ಅಳಿದು ಹೋದರೆ ಸಮತೋಲನ ತಪ್ಪುತ್ತದೆ. ಪರಿಸರ ದಿನದಿಂದ ದಿನಕ್ಕೆ ನಾಶವಾಗುತ್ತಾ ಸಾಗಿದರೆ ನಮ್ಮ ಮುಂದಿನ ಪೀಳಿಗೆಗೆ ಶುದ್ಧ ನೀರು, ಗಾಳಿ, ಆಹಾರ ಸಿಗದೇ ಹೋಗಬಹುದು. ಆದ್ದರಿಂದ ಇದನ್ನರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ.

25) ಅ) ಪರಿಸರ ಸಂರಕ್ಷಣೆ ಇಂದಿನ ಅಗತ್ಯ, ಏಕೆ ವಿವರಿಸಿ.

ಆ) ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿರುವುದರಿಂದಾದ ಪರಿಣಾಮವೇನು? ವಿವರಿಸಿ.

**X..** ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. **1X4=4**

26) ಕ್ರೀಡೆಗಳ ಮಹತ್ವ "ಅಥವಾ" ಕಂಪ್ಯೂಟರ್ ಶಿಕ್ಷಣದ ಉಪಯೋಗಗಳು

**XI..** ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಕೊಟ್ಟ ಮಾಹಿತಿಯನ್ನಾಧರಿಸಿ ಪತ್ರ ಬರೆಯಿರಿ. **1X4=4**

27) ನಿಮ್ಮನ್ನು ಧಾರವಾಡದ ಕುಕನೂರ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ರಮೇಶ/ರಾಣಿ ಎಂದು ಭಾವಿಸಿಕೊಂಡು, ನಿಮ್ಮ ಊರಿನ ಬೀದಿ ದೀಪಗಳನ್ನು ಸರಿಪಡಿಸುವಂತೆ ಕೋರಿ ನಿಮ್ಮ ಗ್ರಾಮದ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಒಂದು ಪತ್ರ ಬರೆಯಿರಿ.

"ಅಥವಾ"

ನಿಮ್ಮನ್ನು ಬೆಳಗಾವಿಯ ತರಳಬಾಳು ಪ್ರೌಢಶಾಲೆಯಲ್ಲಿ ಓದುತ್ತಿರುವ ರಾಧಾಕೃಷ್ಣ/ರುಕ್ಮಿಣಿ ಎಂದು ಭಾವಿಸಿಕೊಂಡು, ನಿನ್ನ ಹುಟ್ಟು ಹಬ್ಬಕ್ಕೆ ಆಗಮಿಸುವಂತೆ ಕೋರಿ ದಾವಣಗೆರೆಯ ಕೋಟೆ ಬೀದಿಯಲ್ಲಿ ವಾಸವಾಗಿರುವ ನಿಮ್ಮ ದೊಡ್ಡಪ್ಪನಿಗೆ ಒಂದು ಪತ್ರ ಬರೆಯಿರಿ.

***********************